ಕಥೆ

# ಹೀಚಿನಲ್ಲೇ ಬಿದ್ದುಹೋಗುವ ನಚಿಕೇತಸ್ಸುಗಳು



**ಎನ್.ಸಿ. ಮಹೇಶ್**

ಕಲೆ: ಎಸ್.ವಿ. ಹೂಗಾರ್

ವರದರಾಜಪ್ಪನವರು ಡಾಕ್ಟರ್ ಆದದ್ದು ಈಚೆಗೆ. ಡಾಕ್ಟರ್ ಅಂದರೆ ಶೆತಸ್ಕೋಪಿನ ಡಾಕ್ಟರ್ ಅಲ್ಲ; ಸಂಪ್ರಬಂಧ - ಅರ್ಥಾತ್ ಮಹಾಪ್ರಬಂಧ ಬರೆದು ಡಾಕ್ಟರೇಟ್ ತೆಗೆದುಕೊಂಡು ಡಾಕ್ಟರ್ ಆದವರು. ಈ ಪದವಿ ಪಡೆಯುವ ಮೊದಲು ಅವರ ಮಾತಿನ ಧಾಟಿ ಬೇರೆ ರೀತಿ ಇತ್ತು ಎನ್ನುವುದು ಹಲವರ ನಿಲುವು. ಆದರೆ, ಅವರನ್ನು ಹತ್ತಿರದಿಂದ ಬಲ್ಲವರು ಇದನ್ನು ಒಪ್ಪುವುದಿಲ್ಲ. ವರದರಾಜಪ್ಪ ಮೊದಲಿಂದ ಇದ್ದದ್ದು ಹಾಗೇ; ಮಾತುಗಳನ್ನು ಸದಾ ತರ್ಕಬದ್ಧವಾಗಿ ಮಂಡಿಸಿಯೇ ಅವರಿಗೆ ಅಭ್ಯಾಸ; ಒಂದು ಖಾಸಗಿ ಪ್ರತಿಷ್ಠಿತ ಡಿಗ್ರಿ ಕಾಲೇಜಿನಲ್ಲಿ ಕನ್ನಡವನ್ನು ಸರಿಸುಮಾರು ಎರಡು ದಶಕಕ್ಕೂ ಹೆಚ್ಚು ಕಾಲ ಪಾಠ ಮಾಡಿ ಮಾಗಿದವರು ಎಂದು ಕಾರಣ ಕೊಡುತ್ತಾರೆ. ಆದರೆ ಇದನ್ನು ಒಪ್ಪದವರು 'ಇಲ್ಲ ಬಿಡಿ ವರದರಾಜಪ್ಪ ಉಪಪ್ರಾಂಶುಪಾಲರ ಹುದ್ದೆ ಅಲಂಕರಿಸಿದ ಮೇಲೆ ಮಾತಿನ ಧಾಟಿ ಬದಲಿಸಿದ್ದಾರೆ' ಎಂದು ಸಮರ್ಥನೆಗೆ ನಿಲ್ಲುತ್ತಾರೆ. ಒಟ್ಟನಲ್ಲಿ ವರದರಾಜಪ್ಪ ಕಾಲೇಜಿನ ಕೆಲಸದ ಜೊತೆಜೊತೆಗೆ ಸಂಘಟನೆ, ಒಂದು ಕಿರು ಪತ್ರಿಕೆಗೆ ಸಂಪಾದಕತ್ವದ ಜವಾಬ್ದಾರಿ, ಬರವಣಿಗೆ, ಅಲ್ಲಲ್ಲಿ ವೇದಿಕೆ ಮೇಲೆ ಮಾತು, ಆಗಾಗ ಹಳ್ಳಿ ಸೊಗಡಿನ ಧಾಟಿ ಬೆರೆಸಿ ತೀರಾ ಹತ್ತಿರದವರೊಂದಿಗೆ ಹರಟೆ ಸಾಗಿಸಿದ್ದರು. ಕಾಲೇಜಿನಲ್ಲಿ ಉಳಿದಿರುವ ಎಂಟು ವರ್ಷದ ತಮ್ಮ ಸರ್ವಿಸ್ ಮುಗಿಸಿದ ನಂತರ ಸರ್ಕಾರಿ ಇಲಾಖೆಗಳಲ್ಲಿನ ಉನ್ನತ ಹುದ್ದೆಗಳ ಕುರ್ಚಿಯಲ್ಲಿ ಗೌರವ ಅಧಿಕಾರಿಯಾಗಿ ಕೂರಲು ಈಗಿನಿಂದಲೇ ವೇದಿಕೆ ಸಜ್ಜು ಮಾಡಿಕೊಳ್ಳುವುದಕ್ಕೆ ಓಡಾಟ ನಡೆದೇ ಇತ್ತು.